ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಹೆಬ್ಬೂರು ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 22.3.16

ಈ ವಾರದ ಮುನ್ಸೂಚನೆ (23.3.16 to 27.3.16 ವರೆಗೆ)

ನಿಯತಾಂಕಗಳು	23/3/16	24/3/16	25/3/16	26/3/16	27/3/16
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	37	35	36	36	36
ಕನಿಷ್ಠ ಉಷ್ಣಾಂಶ (ಡಿ.ಸೆ.)	24	23	22	22	23
ಮೋಡ (ಪ್ರಮಾಣ)	3	3	1	2	1
ಅರ್ದ್ರತೆ ೭.೨೦ ಬೆ (ಶೇ)	62	62	65	60	65
ಅರ್ದ್ರತೆ ೨.೨೦ ಮ (ಶೇ)	18	26	18	14	16
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	8	4	4	6
ಗಾಳಿಯ ದಿಕ್ಕು (ಡಿಗ್ರಿ)	210	190	180	160	160

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ **ತುಮಕೂರು** ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಒಣ ಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 35-37°C ಮತ್ತು ಕನಿಷ್ಠ 22-24°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 60-65 % ಇದ್ದು, ಮಧ್ಯಾಹ್ನ 14-26 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 4-8 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ತರಕಾರಿ ಬೆಳೆಗಳಿಗೆ ಸರಿಯಾದ ಪ್ರಮಾಣದಲ್ಲಿ ನೀರು ಒದಗಿಸಬೇಕು.
- ✓ ಕೋಳಿ ಸಾಕಣೆ,ಜಾನುವಾರು, ರೇಷ್ಮೆ ಕೃಷಿ ಬಿಸಿಲಿನ ತಾಪದಿಂದ ರಕ್ಷಿಸಲು ಸೂಕ್ತ ವ್ಯವಸ್ಥೆ ಕೊಡಬೇಕು.
- ✓ ಜಾನುವಾರು: ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂಡುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸ ಮೇವನ್ನು ತಯಾರಿಸಿ ದನಕರುಗಳಿಗೆ ಕೊಡಿ ಹಾಗೂ ಕುಡಿಯಲು ಸ್ವಚ್ಚವಾದ ನೀರನ್ನು ಒದಗಿಸಿ.
- ✓ ಉಷ್ಣಾಂಶವು ಹೆಚ್ಚಾಗುತ್ತಿರುವುದರಿಂದ ದನಕರುಗಳನ್ನು ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿನಲ್ಲಿ ಮೇಯಿಸಲು ಹೊರಗೆ ಬಿಡಿ.
- ✓ ಜಾನುವಾರುಗಳಿಗೆ ತೆಲಾರಿಯಾ ಲಸಿಕೆಯನ್ನು ಮಾರ್ಚ್ ತಿಂಗಳಿನ ಒಳಗೆ ಹಾಕಿಸಿ.
- ✓ ಲಸಿಕೆಯನ್ನು ಹಾಕಿಸುವುದಕ್ಕೆ ಮುನ್ನ ಜಂತುನಾಶಕವನ್ನು ಕುಡಿಸಿ.

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. ೪ರಷ್ಟು ಬೇವಿನ ಕಷಾಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು ಅಥವಾ ಇಮಿಡಕ್ಲೋಪ್ರಿಡ್ (0.5 ml/L) ಸಿಂಪಡಿಸಿ. ಅಂಟು ದ್ರಾವಣವನ್ನು ಲೇಪಿಸಿದ ಹಳದಿ ಬಣ್ಣದ ಅಂಟು ಬಲೆಗಳನ್ನು ಅಲ್ಲಲ್ಲಿ ಇಡುವುದರಿಂದ ಬಿಳಿನೊಣ, ರೆಕ್ಕೆ ಇರುವ ಏಫಿಡ್ಸ್ ಹಾಗೂ ಇನ್ನಿತರೆ ಕೀಟಗಳು ಆಕರ್ಷಣೆಗೊಂಡು ಆ ಬಲೆಗೆ ಅಂಟಿಕೊಳ್ಳುತ್ತವೆ.
- ✓ ರಸ ಹೀರುವ ಕೀಟಗಳು ಕಂಡುಬಂದರೆ ಆಕ್ಟ್ರ (೧.೦ ಗ್ರಾಂ ಪ್ರತಿ ಲೀ ಗೆ) ಅಥವಾ ಲ್ಯಾನ್ಸರ್ ಗೋಲ್ಡ್ ಸಿಂಪಡಿಸಿ.

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು